
ಸುಮಾರು 200 ಕೆ.ಜಿ. ತೂಕದ ಚಿನ್ನದಿಂದ ನಿರ್ಮಿಸಿದ ಟೂಟಾಂಖ್ ಅಮುನ್‌ನ ಚಿನ್ನದ ಶವಪೆಟ್ಟಿಗೆ, ಸುಮಾರು 15 ಕೆ.ಜಿ. ಚಿನ್ನ ಉಪಯೋಗಿಸಿ ತಯಾರಿಸಿರುವ ಆತನ ಮುಖವಾಡ, ಶ್ರೇಷ್ಠ ಕುಸುರಿಗಾರಿಕೆಯ ಆಭರಣಗಳು ಸೇರಿದಂತೆ 1,700 ವಸ್ತುಗಳು ಅಲ್ಲಿ ದೊರಕಿದವು. ಆತನ ಮುಖವಾಡದಲ್ಲಿ ನೂರಾರು ಬಗೆಬಗೆಯ ಹರಳುಗಳನ್ನು ಜೋಡಿಸಿಡಲಾಗಿದೆ. ಮುಖವಾಡದ ಹಿಂಭಾಗದಲ್ಲಿ ಚಿನ್ನದ ಜಡೆಗಂಟಿದೆ. ಕತ್ತಿನ ಹಿಂಭಾಗವನ್ನು ಆವರಿಸಿರುವ ಚಿನ್ನದ ಹೊದಿಕೆಯ ಮೇಲೆ ಕೆಲವು ರಕ್ಷಾ ಸ್ತೋತ್ರಗಳನ್ನು ಹೈರೋಗ್ಲಿಫ್‌ನಲ್ಲಿ ಕೆತ್ತಿದ್ದಾರೆ. ಚಿನ್ನದಲ್ಲಿ ನಿರ್ಮಿಸಲಾದ ಶವಪೆಟ್ಟಿಗೆಯ ಮೇಲೆ ಅತ್ಯಂತ ಸೂಕ್ಷ್ಮವಾದ ಕುಸುರಿಗಾರಿಕೆಯಿದೆ.





ಟೂಟಾಂಖ್ ಅಮುನ್ ಒಬ್ಬ ಸಾಧಾರಣ ಫೆರೋ. ಇತಿಹಾಸದಲ್ಲಿ ಅಂತಹ ಪ್ರಭಾವಿ ಹೆಸರಿರುವವನೂ ಅಲ್ಲ. ಅಂತಹ ವ್ಯಕ್ತಿಯ ಗೋರಿಯೇ ಇಷ್ಟು ಅಮೂಲ್ಯವಾದ ವಸ್ತುಗಳನ್ನು ಹೊಂದಿದ್ದರೆ, ಈಜಿಪ್ಟ್‌ನ ಇತಿಹಾಸವನ್ನು ನಿಜಕ್ಕೂ ಸುವರ್ಣಾಕ್ಷರಗಳಿಂದ ಬರೆದ ಇಮ್ಮಡಿ ರಾಮ್ಸೆಸ್‌ನ ಗೋರಿ ಹೇಗಿದ್ದಿರಬಹುದು ಎಂಬ ಊಹೆಯೇ ರೋಮಾಂಚನವನ್ನುಂಟು ಮಾಡುತ್ತದೆ.

## ರಾಯಲ್ ಮಮ್ಮೀಸ್

ಮ್ಯೂಸಿಯಂನೊಳಗೊಂದು ಮಮ್ಮಿಗಳ ಮರಿ ಮ್ಯೂಸಿಯಂ ಇದೆ. 'ಮಮ್ಮಿ' ಎಂಬುದು ಅರೇಬಿಕ್ ಮೂಲದ ಪದ. ಅರೇಬಿಕ್ ಭಾಷೆಯಲ್ಲಿ 'ಮಮ್ಮಿಯಾ' ಎಂದರೆ ಮಧ್ಯ ಪ್ರಾಚ್ಯ ಪರ್ವತಗಳಲ್ಲಿ ಕಂಡುಬರುವ ಒಂದು ಬಗೆಯ ಕಪ್ಪು ಖನಿಜ. ಶವಗಳು ಕಪ್ಪಾಗಿದ್ದುದರಿಂದ, ಸಂಸ್ಕರಿಸಿಟ್ಟ ಮೃತ ದೇಹಗಳನ್ನು 'ಮಮ್ಮಿ' ಎಂದು ಕರೆಯುವುದು ರೂಢಿಯಾಯಿತು. ಲ್ಯಾಟಿನ್‌ನ ಮಮ್ಮಿಯಾ ಅನ್ನುವ ಪದದಿಂದ ಇಂಗ್ಲಿಷ್‌ನ ಮಮ್ಮಿ ಎಂಬ ಪದ ಹುಟ್ಟಿದೆ ಎನ್ನುತ್ತಾರೆ.

ಗಾಜಿನ ಪೆಟ್ಟಿಗೆಗಳಲ್ಲಿ 21 ಮಮ್ಮಿಗಳನ್ನಿಟ್ಟು ಇಲ್ಲಿ ಪ್ರದರ್ಶಿಸಲಾಗಿದೆ. ಮೊದಲ ಸೇಟಿ, ಆತನ ಮಗ ಎರಡನೇ ರಾಮ್ಸೆಸ್, ಎರಡನೇ ತುಟ್ಮೋಸ್, ರಾಣಿ ಮೆರೆಟ್ ಅಮುನ್ (ಮೊದಲನೇ ಅಮೆನ್ಹೊಟೆಪ್ ಪತ್ನಿ) ಮುಂತಾದವರ ಮಮ್ಮಿಗಳಿವೆ. ಇಲ್ಲಿನ ಮಮ್ಮಿಗಳಲ್ಲಿ ಸಾವಿರಾರು ವರ್ಷಗಳ ನಂತರವೂ ತಲೆಗೂದಲು, ಹಲ್ಲು, ಉಗುರು ಹಾಗೆಯೇ ಇವೆ.

## ಪ್ರಾಣಿಗಳ ಮಮ್ಮಿಗಳು

ಪುರಾತನ ಈಜಿಪ್ಟಿನ ಜನ ದೊರೆಗಳನ್ನು ಮಾತ್ರ ಮಮ್ಮಿ ಮಾಡುತ್ತಿರಲಿಲ್ಲ. ಮೊಸಳೆ, ಬೆಕ್ಕು ಮುಂತಾದ ಪ್ರಾಣಿಗಳನ್ನೂ ಮಮ್ಮಿ ಮಾಡುತ್ತಿದ್ದರು. ಬೆಕ್ಕು, ಕೋತಿ, ಗಿಡುಗ, ಮೀನುಗಳ ಮಮ್ಮಿಗಳನ್ನೂ ಇಲ್ಲಿ ಕಾಣಬಹುದು.

ಈಜಿಪ್ಷಿಯನ್ನರು ಗೂಳಿ, ಮೊಸಳೆ, ಹದ್ದು, ಹಸು, ಬಾತು, ಮೇಕೆ, ಟಗರು, ಬೆಕ್ಕು, ನಾಯಿ, ಕೋಳಿ, ಗುಬ್ಬಿ, ನರಿ, ಹಾವುಗಳನ್ನು ಪೂಜಿಸುತ್ತಿದ್ದರು. ಅವರ ನಂಬಿಕೆಯಂತೆ ದೇವತೆಗಳು ಮನುಷ್ಯರಾದಾಗಲೂ ತಮ್ಮ ಪ್ರಾಣಿ ಪ್ರತಿರೂಪಗಳನ್ನೊ, ಪ್ರಾಣಿ ಪ್ರತೀಕಗಳನ್ನೋ ಉಳಿಸಿಕೊಳ್ಳುತ್ತಿದ್ದರು. ಅಮುನ್ ದೇವರನ್ನು ಹೆಬ್ಬಾತು ಅಥವಾ ಟಗರಿನ ರೂಪದಲ್ಲಿ ಪ್ರತಿಬಿಂಬಿಸುತ್ತಿದ್ದರು. ರಾ ದೇವರಿಗೆ ಮಿಡತೆ ಅಥವಾ ಗೂಳಿಯ ರೂಪ, ಒಸ್ಸೆರಿಸ್ ದೇವರಿಗೆ ಗೂಳಿ ಅಥವಾ ಟಗರಿನ ಪ್ರತೀಕ. ಸೆಬೆಕ್‌ಗೆ ಮೊಸಳೆ, ಹೋರಸ್‌ಗೆ ಹದ್ದು ಅಥವಾ ಗಿಡುಗ, ಹಾಥೋರ್‌ಗೆ ಗೋವು, ಬುದ್ಧಿ ದೇವತೆ ಥೋತ್‌ಗೆ ಕಪಿ ಪ್ರತೀಕವಾಗಿದ್ದವು.

## ಮಮ್ಮಿ ಬಗ್ಗೆ ಮಮಕಾರ

ಈಜಿಪ್ಷಿಯನ್ನರು ಶಾಸ್ತ್ರಬದ್ಧವಾಗಿ, ವೈಜ್ಞಾನಿಕವಾಗಿ, ಕ್ರಿಯಾಶೀಲವಾಗಿ, ಶಿಸ್ತುಬದ್ಧವಾಗಿ, ಪ್ರೀತಿಯಿಂದ ಹೆಣವನ್ನು ಸಿಂಗರಿಸುತ್ತಿದ್ದರು. 'ಸಾವಾಗ ನಾಲ್ಕು ಜನರ ಬಾಯಾಗ ಇರಬೇಕ' ಎಂಬುದು ನಮ್ಮ ಜನಪದರ ಮಾತು. ಹುಟ್ಟನ್ನು ಸಿಹಿ ಹಂಚಿ ಸಂತೋಷದಿಂದ ಬರಮಾಡಿಕೊಳ್ಳುವಂತೆಯೇ ಸಾವನ್ನು ಗೌರವಾನ್ವಿತವಾಗಿ ಬೀಳ್ಕೊಡುವುದು ಹೆಣಕ್ಕೆ ಶೃಂಗಾರ ಮಾಡುವುದರ ಹಿಂದಿನ ಭಾವ ಎನಿಸುತ್ತದೆ. ಏಕೆಂದರೆ ಸತ್ತ ವ್ಯಕ್ತಿ ಅನೇಕ ವರ್ಷಗಳಿಂದ ನಮ್ಮ ಬದುಕು ಮತ್ತು ದಿನದ ವ್ಯವಹಾರದೊಂದಿಗೆ ಇರುತ್ತಾನೆ. ಅಂಥಹವನು ಕೃತಜ್ಞತೆ ಮತ್ತು ಗೌರವಯುತ ಬೀಳ್ಕೊಡುಗೆಗೆ ಅರ್ಹನಾಗಿರುತ್ತಾನೆ. ಹುಟ್ಟಿನ ಕ್ರಿಯೆಗಳಿಗೆ ಜಾತಕರ್ಮವಿದ್ದಂತೆ ಸಾವಿಗೂ ಇರುತ್ತದೆ. ನಮ್ಮಲ್ಲಿ ಇದರ ಅವಧಿ ಕಡಿಮೆ ಎನ್ನಬಹುದು. ಆದರೆ ಮಮ್ಮಿಗಳ ಆಚರಣೆಯಿರುವಂತಹ ಈಜಿಪ್ಷಿಯನ್ನರಲ್ಲಿ ಈ ಅವಧಿ ಕೊಂಚ ಹೆಚ್ಚು. ಇದಕ್ಕೆ ಇನ್ನೊಂದು ಕಾರಣವೆಂದರೆ ಹೋದವರು ಒಳ್ಳೆಯವರು, ಅವರನ್ನು ನೆನಪಿಸಿಕೊಳ್ಳಬೇಕೆಂಬ ಪ್ರೀತಿ ಗೌರವ ಹಾಗೂ ಈ ಎರಡೂ ಕೂಡಿದ ಭಕ್ತಿಯೂ ಇರುತ್ತದೆ.

ಮಮ್ಮೀಕರಣವು ಒಂದು ರೀತಿಯಲ್ಲಿ ಪುರಾತರನ ಪೋಸ್ಟ್ ಮಾರ್ಟಮ್. ಈಗಿನ ಮರಣೋತ್ತರ ಕ್ರಿಯೆಗಳು ಮಾಹಿತಿಗಾಗಿ, ರೋಗ ಪತ್ತೆಗಾಗಿ, ಸಾವಿನ ಕಾರಣ ತಿಳಿದುಕೊಳ್ಳಲೆಂದು ಮಾಡಿದರೆ, ಈಜಿಪ್ಷಿಯನ್ನರು ಮರಣೋತ್ತರ ಆತ್ಮಾನುಸಂಧಾನಕ್ಕಾಗಿ ಮಾಡುತ್ತಿದ್ದರು. ಹೃದಯವೊಂದನ್ನು ಬಿಟ್ಟು ದೇಹದ ಎಲ್ಲಾ ಅಂಗಗಳ ರಕ್ತ, ಮಾಂಸವನ್ನೆಲ್ಲಾ ಹೊರತೆಗೆದು ರಾಸಾಯನಿಕಗಳನ್ನು ಬಳಸಿ ಶವಸಂಸ್ಕರಣೆಯನ್ನು ನಡೆಸುತ್ತಿದ್ದರು. ಸುಗಂಧ ದ್ರವ್ಯಗಳನ್ನು ಹಚ್ಚಿ ಸಿಂಗರಿಸುತ್ತಿದ್ದರು. ಕಾಲಾತೀತ ಎನ್ನುವಂತೆ ಮಮ್ಮಿಗಳು ಉಳಿದುಕೊಂಡಿವೆ.

ಈಜಿಪ್ಷಿಯನ್ನರ ಕ್ರಮಗಳ ಬಗ್ಗೆ ನಿಖರ ಮಾಹಿತಿ ಸಿಗದಿದ್ದರೂ, ದೇವಾಲಯಗಳ ಮೇಲೆ ಕೆತ್ತಲಾಗಿರುವ ಚಿತ್ರ ಹಾಗೂ ಲಿಪಿಗಳ ಮೂಲಕ ಕೆಲವೊಂದು ವಿಷಯಗಳು ಬೆಳಕಿಗೆ ಬಂದಿವೆ. ದೇವಾಲಯ ಸಮುಚ್ಚಯಗಳಲ್ಲಿ ಈ ಪವಿತ್ರ ಕಾರ್ಯಕ್ಕಾಗಿಯೇ ಪ್ರತ್ಯೇಕ ಸ್ಥಳವಿರುತ್ತಿತ್ತು. ಶವವನ್ನು ಶುದ್ಧೀಕರಿಸಿ, ಕೊಳೆಯಬಹುದಾದ ದೇಹದ ಒಳಭಾಗಗಳನ್ನೆಲ್ಲ ಹೊರತೆಗೆಯಲಾಗುತ್ತಿತ್ತು. ಮಿದುಳಿಗಿಂತ ಹೃದಯ ಅಮೂಲ್ಯದ್ದೆಂದು ಅವರು ಭಾವಿಸಿದ್ದರಿಂದ ಹೃದಯವನ್ನು ಮುಟ್ಟುತ್ತಿರಲಿಲ್ಲ. ಮಿದುಳು, ಜಠರ, ಶ್ವಾಸಕೋಶ, ಕರುಳು, ಯಕೃತ್ತು ಮುಂತಾದವುಗಳನ್ನು ಹೊರತೆಗೆಯಲು ಅವರು ಬಳಸುತ್ತಿದ್ದ ಉಪಕರಣಗಳ ಚಿತ್ರಗಳನ್ನು ಕೆಲ ದೇವಾಲಯಗಳ ಮೇಲೆ ಚಿತ್ರಿಸಲಾಗಿದೆ. ವಿವಿಧ ಅಂಗಗಳನ್ನು ಅವರು ವಿಶೇಷ ಭರಣಿಗಳಲ್ಲಿ (ಕೆನೋಪಿಕ್ ಜಾರ್‌ಗಳಲ್ಲಿ) ಇಡುತ್ತಿದ್ದರು. ಶವಕ್ಕೆ ವಿಶೇಷ ರಾಸಾಯನಿಕಗಳನ್ನು ಸವರಿ, ಪ್ಯಾಪಿರಸ್ ಪಟ್ಟಿಗಳು ಮತ್ತು ಹತ್ತಿಯ ಬಟ್ಟೆಯಿಂದ ಸುತ್ತಲಾಗುತ್ತಿತ್ತು. ವಿವಿಧ ಒಡವೆಗಳು, ಶವದ ಮುಖಕ್ಕೆ ಮುಖವಾಡವನ್ನಿಟ್ಟು ಶವದ ಪೆಟ್ಟಿಗೆಯೊಳಗೆ ಇಡುತ್ತಿದ್ದರು. ಅದನ್ನು ಇರಿಸಲೆಂದು ನಿಗದಿಯಾದ ಸ್ಥಳಕ್ಕೆ ತಂದು ಶಿಲೆಯ ಶವದಾನಿಯಲ್ಲಿ ಇಡಲಾಗುತ್ತಿತ್ತು. ಈ ಎಲ್ಲಾ ಕ್ರಿಯೆಗಳೂ ಹಲವಾರು ದಿನಗಳಕಾಲ ನಡೆಯುತ್ತಿದ್ದವು. ಅಸಂಖ್ಯ ಅಮೂಲ್ಯ ವಸ್ತುಗಳನ್ನು ಸಮಾಧಿ ಕೋಣೆಯಲ್ಲಿ ಇರಿಸಲಾಗುತ್ತಿತ್ತು.

## ವಿದೇಶದಲ್ಲಿ ಈಜಿಪ್ಷಿಯನ್ ಸಂಗ್ರಹ

ಕೈರೋ ಹೊರತುಪಡಿಸಿದರೆ ಫೆರೋಗಳ ಕಾಲದ ಅಪರೂಪದ ವಸ್ತುಗಳ ಸಂಗ್ರಹವಿರುವುದು ಇಟಲಿಯಲ್ಲಿ. ಇಟಲಿಯ ಟುರಿನ್‌ನಲ್ಲಿರುವ ಈಜಿಪ್ಷಿಯನ್ ಮ್ಯೂಸಿಯಂನಲ್ಲಿ ಕಾರ್ನಾಕ್ ದೇವಾಲಯದ ಅಪರೂಪದ ಮೂರ್ತಿಗಳು, ಗೋರಿಗಳಲ್ಲಿನ ಅಪರೂಪದ ವಸ್ತುಗಳ ಸಂಗ್ರಹವಿದೆ.

ಬರ್ಲಿನ್‌ನಲ್ಲಿ ಈಜಿಪ್ಷಿಯನ್ ಮ್ಯೂಸಿಯಂ ಇದೆ. ಅದು ಕೈರೋ ಮ್ಯೂಸಿಯಂಗಿಂತ 13 ವರ್ಷ ಹಳೆಯದು. ಅಲ್ಲಿ ಈಜಿಪ್ಟಾಲಜಿಗೆ ಸಂಬಂಧಿಸಿದ ಅಮೂಲ್ಯ ವಸ್ತುಗಳ ಸಂಗ್ರಹವಿದೆ. 3,350 ವರ್ಷಗಳಿಗೂ ಹಿಂದಿನ ಸುಂದರ ರಾಣಿ ನೆಫರ್ಟಿಟಿಯ ಮೂರ್ತಿಯಿದೆ. ಅದನ್ನು ವಾಪಸ್ ಪಡೆಯಲು ಈಜಿಪ್ಟ್ ಸರ್ಕಾರ ಪ್ರಯತ್ನಿಸುತ್ತಿದೆ.

ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿ ಪ್ರಸಿದ್ಧ ರೊಸೆಟ್ಟಾ ಶಿಲೆ, ಎರಡನೇ ರಾಮ್ಸೆಸ್‌ನ ಎದೆಯವರೆಗಿನ ಪ್ರತಿಮೆ, ಪ್ಯಾಪಿರಸ್ ಕಾಗದದ ಸುರುಳಿಗಳು, ಮಮ್ಮಿಗಳು ಮತ್ತು ಗೋರಿ ವಸ್ತುಗಳ ಸಂಗ್ರಹವಿದೆ.

ನ್ಯೂಯಾರ್ಕ್‌ನ ಮೆಟ್ರೋಪಾಲಿಟನ್ ಮ್ಯೂಸಿಯಂನಲ್ಲಿ ಒಂದು ಇಡೀ ಈಜಿಪ್ಟ್ ದೇವಾಲಯವೇ ಇದೆ. ಆಸ್ವಾನ್ ಹೈಡ್ಯಾಮ್ ನಿರ್ಮಾಣವಾದಾಗ ಏರುತ್ತಿದ್ದ ನೈಲ್ ನದಿ ನೀರು ಮುಳುಗಿಸಿದ ಹಲವು ದೇವಾಲಯಗಳನ್ನು ಬೇರೆಡೆ ಪುನರ್ ಸ್ಥಾಪಿಸಲಾಯಿತು. ಅದಕ್ಕಾಗಿ ಸಹಾಯ ಮಾಡಿದ ಅಮೆರಿಕನ್ನರಿಗೆ ಕೃತಜ್ಞತೆ ಸೂಚಿಸಲು ಈಜಿಪ್ಟ್ ಸರ್ಕಾರ ಒಂದು ದೇವಾಲಯವನ್ನೇ ಉಡುಗೊರೆಯಾಗಿ ನೀಡಿತ್ತು!

ಈಗ ಗೀಜಾ ಪಿರಮಿಡ್ಡುಗಳ ಬಳಿ ಸುಮಾರು ಒಂದು ಬಿಲಿಯನ್ ಡಾಲರ್ ವೆಚ್ಚದ ಹೊಸ ಮ್ಯೂಸಿಯಂ ಕಟ್ಟಲು ಪ್ರಾರಂಭಿಸಿದ್ದು, ಅದು ಈ ವರ್ಷದೊಳಗೆ ಮುಗಿಯುವ ಸಾಧ್ಯತೆಯಿದೆ. ಅದು ಪ್ರಪಂಚದ ಅತಿ ದೊಡ್ಡ ಮ್ಯೂಸಿಯಂ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.